# ಸತ್ಯಶೋಧನೆಗೆ ಸಾಮಾಜಿಕ ಕಾರ್ಯಕರ್ತರ ಸಮಿತಿ

ಡಿ.ಜೆ. ಹಳ್ಳಿ ಘಟನೆ ಸಂಬಂಧ ಸತ್ಯಶೋಧನೆಗೆ ಸಾಮಾಜಿಕ ಕಾರ್ಯಕರ್ತರು, ವಕೀಲರು, ದಲಿತ ಸಂಘಟನೆಗಳ ಮುಖಂಡರು, ಪರಿಸರ ಹೋರಾಟಗಾರರ ತಂಡ ಮುಂದಾಗಿದೆ. 23 ಸದಸ್ಯರನ್ನು ಒಳಗೊಂಡ 'ಬೆಂಗಳೂರು ನಾಗರಿಕ ಸಂಘಟನೆಗಳ ಸತ್ಯಶೋಧನಾ ಸಮಿತಿ' ರಚನೆಯಾಗಿದೆ

ಗಲಭೆ ಪ್ರದೇಶದ ಎಲ್ಲಾ ಸಮುದಾಯದ ನಿವಾಸಿಗಳು, ತೊಂದರೆಗೆ ಒಳಗಾದ ಕುಟುಂಬ ಸದಸ್ಯರು, ಪೊಲೀಸ್ ಅಧಿಕಾರಿಗಳು, ಜನಪ್ರತಿನಿಧಿಗಳು, ಗಲಭೆಯಲ್ಲಿ ಗಾಯಗೊಂಡವರನ್ನು ಭೇಟಿಯಾಗಿ ಮಾಹಿತಿ ಸಂಗ್ರಹಿಸಲಿದೆ. ಮಾಹಿತಿ ಹಂಚಿಕೊಳ್ಳಲು ಬಯಸುವವರು 8277288204 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಬಹುದು. fftblore@protonmail.com ಗೆ ಇ-ಮೇಲ್ ಕಳುಹಿಸಬಹುದು